
UASB LIBRARY
Newspaper Clippings
Pg .1 Tuesday 07-09-2021 Jai Kisan



ಡಾ. ರಾಜೇಂದ್ರ ಪ್ರಸಾದ್ ಸಲಹೆ | ವಿಜಯವಾಣಿ 'ರೈತಮಿತ್ರ' ಅಂಕಣ ಅನಾವರಣ

ಮಾಧ್ಯಮಗಳು ಕೃಷಿಗೆ ಉತ್ತೇಜನ ನೀಡಬೇಕು

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ ರೈತರಿಗಾಗಿ ತಂದಿರುವ ಯೋಜನೆಗಳು, ತಳಿಗಳ ಕುರಿತು ಮಾಧ್ಯಮಗಳಿಗೆ ಬೆಳಕು ಚೆಲ್ಲುವ ಮೂಲಕ ಯುವಕರು ಕೃಷಿ ಕಡೆ ಗಮನಹರಿಸುವಂತೆ ಮಾಡಬೇಕು ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್. ರಾಜೇಂದ್ರ ಪ್ರಸಾದ್ ಹೇಳಿದ್ದಾರೆ.

» ಹಲವು ಗಣ್ಯರ ಉಪಸ್ಥಿತಿ

ಕೃಷಿ ವಿವಿ ಸಹಯೋಗದೊಂದಿಗೆ **ವಿಜಯವಾಣಿ** ಪತ್ರಿಕೆ ಪ್ರತಿ ಸೋಮವಾರ ಪ್ರಕಟಿಸಲಿರುವ 'ರೈತಮಿತ್ರ' ವಿಶೇಷ ಪ್ರಶ್ನೋತ್ತರ ಅಂಕಣವನ್ನು ವಿವಿ ಆವರಣದಲ್ಲಿ ಬಿಡುಗಡೆ ಮಾಡಿ ಮಾತನಾಡಿದರು. ಜನರಿಗೆ ಕೃಷಿ ಚಟುವಟಿಕೆ ಬಗ್ಗೆ ಹಲವು ತಪ್ಪು ಕಲ್ಪನೆಗಳಿವೆ. ಇದನ್ನು ಹೋಗಲಾಡಿಸಬೇಕಾದಲ್ಲಿ ಕೃಷಿ ಪ್ರೋತ್ಸಾಹದಾಯಕ ಚಟುವಟಿಕೆಗಳ ಬಗ್ಗೆ ಲೇಖನಗಳು ಮೂಡಿಬರಬೇಕಿದೆ. ಆಂದಾಗ ಮಾತ್ರ ಯುವಕರು ಕೃಷಿಯ ಕಡೆ ಒಲವು ತೋರಿಸಲು ಸಾಧ್ಯ. ಈ ಕೆಲಸವನ್ನು ಮಾಧ್ಯಮಗಳು ಮಾಡಬೇಕು ಎಂದು ಹೇಳಿದರು.

ಕೃಷಿ ವಿವಿಯು ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯ ಕೆಲಸವನ್ನು ಮಾಡುತ್ತಿದೆ. ನಾವು 300ಕ್ಕೂ ಹೆಚ್ಚು ಹೊಸ ತಳಿಗಳನ್ನು ಸಂಶೋಧನೆ ಮಾಡಿ ಹೊರ ತಂದಿದ್ದೇವೆ. ಕೃಷಿಯಲ್ಲಿ ತಂತ್ರಜ್ಞಾನ ಬಳಕೆ ಮಾಡುವುದನ್ನು ತಿಳಿಸಿಕೊಟ್ಟಿದ್ದೇನೆ. ಸೂಕ್ತ ಕೃಷಿ ಪದ್ಧತಿ ಅಳವಡಿಸಿಕೊಂಡರೆ ರೈತರು ಉತ್ತಮ ಆದಾಯ ಗಳಿಸಬಹುದು ಎಂದರು.

'ರೈತರ ಮಿತ್ರ' ಎಂದು ಕೃಷಿಯಲ್ಲಿ ಡಿಪ್ಲೊಮಾ ಅಭ್ಯರ್ಥಿಗಳ ನೇಮಕಕ್ಕೆ ಮುಂದಾಗಿದ್ದು, ಇವರು ಪ್ರತಿ ಗ್ರಾಮಗಳಿಗೆ ಹೋಗಿ ಕೃಷಿ ಮಹತ್ವ, ಪದ್ಧತಿ ಬಗ್ಗೆ ತಿಳಿಸಿಕೊಡಲಿದ್ದಾರೆ ಎಂದರು.



ವಿಜಯವಾಣಿಯ ರೈತಮಿತ್ರ ವಿಶೇಷ ಅಂಕಣವನ್ನು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ರಾಜೇಂದ್ರಪ್ರಸಾದ್ ಬಿಡುಗಡೆ ಮಾಡಿದರು. ಡಾ. ರಘುಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ನಾವು ಅಗ್ರಿವಾರ್ ರೂಮ್ ಎಂಬ ವಿಭಾಗ ತೆರೆದು ರೈತರಿಗೆ ಕೃಷಿ ಕುರಿತು ಇರುವ ಗೊಂದಲಗಳಿಗೆ ತಕ್ಷಣ ಮಾಹಿತಿ ನೀಡುತ್ತಿದ್ದೇವೆ. ಸದಾ ರೈತರ ಪರವಾಗಿ ವಿವಿ ಕೆಲಸ ಮಾಡುತ್ತಿದೆ.
| ಡಾ.ರಾಜೇಂದ್ರ ಪ್ರಸಾದ್
ಕುಲಪತಿ, ಕೃಷಿವಿವಿ ಬೆಂಗಳೂರು

07-09-2021
Vv Pg 01



Manda buffalo gets 'unique breed' tag

SATYASUNDAR BARIK
BHUBANESWAR

The National Bureau of Animal Genetic Resources (NBAGR) has recognised the Manda buffalo, found in the Eastern Ghats and plateau of Koraput region of Odisha, as the 19th unique breed of buffaloes found in India.

The Manda are resistant to parasitic infections, less prone to diseases and can thrive on modest resources.

This buffalo germ-plasm was first identified through a survey conducted by the Animal Resource Development (ARD) department of Odisha in collaboration with the Orissa University of Agriculture and Technology (OUAT).

Bishnupada Sethi, former ARD director and Susanta Kumar Dash, an animal geneticist of OUAT, had played a key role in seeking national recognition for the Manda breed.The NBAGR, affiliated to Indian Council of Agriculture Research, made an assessment and recognised it as an indigenous and unique breed.

07-09-2021
Hindu Pg 10

Database created with records of 5.5 cr. farmers

Centre hopes to cover 8 cr. by linking it to State records

SPECIAL CORRESPONDENT
NEW DELHI

The Centre has created a National Farmers' Database with records of 5.5 crore farmers, which it hopes to increase to 8 crore farmers by December by linking it to State land record databases, according to Agriculture Minister Narendra Singh Tomar.

Addressing Chief Ministers at a virtual conference on agriculture on Monday, Mr. Tomar said the farmers' database was key to advances in digital agriculture. "Agriculture has to be linked with digital technology, scientific research and knowledge," he said, according to an official statement

Mr. Tomar explained that the national database was created by taking data from existing national schemes such as PM-KISAN, soil health cards and the insurance scheme PM Fasal Bima Yojna. So far, 5.5 crore farmers had been identified in this manner. The Minister urged the States to create their own databases using the national database's federated structure and also allow linkages to the land records maintained by the States.



All covered: The Centre has urged the States to create their databases of farmers using the national database. ▪ FILE PHOTO

With the help of State governments, a total of eight crore farmers would be included by the end of the year, he said. He also urged them to study the Karnataka model for digital agriculture presented at the conference.

In July, Mr. Tomar told the Lok Sabha that the database could be used "for targeted service delivery with higher efficiency and in a focussed and time-bound manner" and that it was the core for the proposed Agristack digital agriculture ecosystem. Already, companies such as Microsoft, Amazon and Patanjali had been asked to develop technology solutions for farmers using data from the database. Activists have raised privacy and consent concerns about using farmers' data in such a way.

07-09-2021 Hindu Pg 08

ಬೆಳೆ ವಿಮೆ ಬೀಡ್ ಸೂತ್ರ ಮರುಪರಿಶೀಲನೆ ಸಂಭವ

ಹೊಸದಿಲ್ಲಿ: ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ರಾಜ್ಯಗಳನ್ನು ಉತ್ತೇಜಿಸಲು ಪ್ರಾಯೋಗಿಕವಾಗಿ ಕಲ್ಪಿಸಿದ್ದ 'ಬೀಡ್ ಸೂತ್ರ'ವನ್ನು ಕೇಂದ್ರ ಸರಕಾರ ಮರು ಪರಿಶೀಲಿಸುವ ಸಾಧ್ಯತೆ ಇದೆ.

ಕಳೆದ 2016ರಲ್ಲಿ ಜಾರಿಯಾಗಿದ್ದ ಪ್ರಧಾನಮಂತ್ರಿ ಫಸಲ್ ಬಿಮಾ (ಪಿಎಂಎಫ್‌ಬಿಐ) ಬೆಳೆ ವಿಮೆ ಯೋಜನೆಯಲ್ಲಿ ಹವಾಮಾನ ವೈಪರೀತ್ಯದಿಂದ ಬೆಳೆ ಹಾನಿಯಾದಾಗ ರೈತರು ವಿಮೆ ಪರಿಹಾರ ಪಡೆಯಬಹುದು. ರೈತರು ಪ್ರೀಮಿಯಂನ ಶೇ.1.5-2ರಷ್ಟನ್ನು ಪಾವತಿಸಿದರೆ, ಉಳಿದ ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಭರಿಸುತ್ತವೆ.

ಆದರೆ ಇದೀಗ ಯೋಜನೆಯ ಜಾರಿಯಲ್ಲಿ ಅಳವಡಿಸಿರುವ 'ಬೀಡ್ ಸೂತ್ರದ' ಬಗ್ಗೆ ಕೇಂದ್ರ ಕಳವಳ ಹೊಂದಿರುವುದಾಗಿ ವರದಿಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ನೀಡುವ ಒಟ್ಟು ಪ್ರೀಮಿಯಂನಲ್ಲಿ ಬಹುಪಾಲನ್ನು ರಾಜ್ಯ ಸರಕಾರಗಳು ಪಡೆಯುತ್ತಿರುವುದು ಹಾಗೂ ಬೀಡ್ ಸೂತ್ರ ಅಳವಡಿಸಿರುವ ಮಹಾರಾಷ್ಟ್ರದ ಬೀಡ್ ಜಿಲ್ಲೆ ಹಾಗೂ ಇತರ ಕಡೆಗಳಲ್ಲಿ ಬೆಳೆಹಾನಿ ಮುಂದುವರಿದಿದ್ದರೂ, ಬೆಳೆ ವಿಮೆ ಕ್ಲೇಮ್ ಕಡಿಮೆಯಾಗುತ್ತಿರುವುದು ಇದಕ್ಕೆ ಕಾರಣ. ಹೀಗಾಗಿ ಕೇಂದ್ರ ಸರಕಾರ 80-110 ಪ್ಲಾನ್ (ಬೀಡ್ ಸೂತ್ರ) ಅನ್ನು ಮರು ಪರಿಶೀಲಿಸುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.

ಬೀಡ್ ಸೂತ್ರದ ಪರಿಣಾಮ

ಬೀಡ್ ಜಿಲ್ಲೆಯಲ್ಲಿ ಪ್ರತಿ ವರ್ಷ ಒಂದಿಲ್ಲೊಂದು ಕಾರಣಗಳಿಂದ ರೈತರಿಗೆ ಬೆಳೆ ಹಾನಿಯಾಗಿ ಬೆಳೆ ವಿಮೆ ಕ್ಲೇಮ್ ವ್ಯಾಪಕವಾಗಿತ್ತು. ಹೀಗಾಗಿ ವಿಮೆ ಕಂಪನಿಗಳಿಗೆ ನಷ್ಟವಾಗುತ್ತಿತ್ತು. ಜಿಲ್ಲೆಯಲ್ಲಿ ಬೆಳೆ ವಿಮೆ ವಿತರಣೆಗೆ ವಿಮೆ ಕಂಪನಿಗಳು ಹಿಂದೇಟು ಹಾಕುತ್ತಿದ್ದವು. ಯೋಜನೆ ಜಾರಿಗೊಳಿಸಲು ಸರಕಾರಕ್ಕೆ ಕಷ್ಟಕರವಾಗಿತ್ತು. ಹೀಗಾಗಿ 2020ರಲ್ಲಿ ರಾಜ್ಯ ಸರಕಾರ ಸಂಗ್ರಹವಾದ ಪ್ರೀಮಿಯಂನ ಶೇ.110ಕ್ಕಿಂತ ಮೇಲ್ಪಟ್ಟ ಕ್ಲೇಮ್ ಗಳನ್ನು ತಾನೇ ಭರಿಸುವುದಾಗಿ ತಿಳಿಸಿತು. ಒಂದು ವೇಳೆ ಪರಿಹಾರವು ಸಂಗ್ರಹಿತ ಪ್ರೀಮಿಯಂಗಿಂತ ಕಡಿಮೆಯಾದರೆ ಶೇ.20ರಷ್ಟನ್ನು ಕಂಪನಿಗಳು ಇಟ್ಟುಕೊಂಡು ಉಳಿದ ಪ್ರೀಮಿಯಂ ಅನ್ನು ಸರಕಾರಕ್ಕೆ ಹಿಂತಿರುಗಿಸಬೇಕು ಎಂದು ನಿಯಮ ರಚಿಸಲಾಯಿತು. ಕಳೆದ ಮುಂಗಾರು ಸೀಸನ್‌ನಲ್ಲಿ ಬೀಡ್ ಜಿಲ್ಲೆಯಲ್ಲಿ 803 ಕೋಟಿ ರೂ. ಪ್ರೀಮಿಯಂ ಸಂಗ್ರಹವಾಗಿದ್ದರೆ ಕ್ಲೇಮ್ ಕೇವಲ 8.61 ಕೋಟಿ ರೂ. ಆಗಿತ್ತು. ವಿಮೆ ಕಂಪನಿಗಳು 160 ಕೋಟಿ ರೂ. ಗಳನ್ನು ಕಳೆದು 634 ಕೋಟಿ ರೂ.ಗಳನ್ನು ಸರಕಾರಕ್ಕೆ ಮರು ಪಾವತಿಸಿತ್ತು.



- ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ ಜಾರಿಯಾಗಿದ್ದ ಬೀಡ್ ಸೂತ್ರದ ಬಗ್ಗೆ ಕಳವಳ
- ಬೆಳೆಹಾನಿಯಾಗಿದ್ದರೂ ಬೆಳೆ ವಿಮೆ ಕ್ಲೇಮ್ ಕುಸಿತ
- ಸರಕಾರಕ್ಕೆ ಕಗ್ಗಂಟಾದ ಬೆಳೆ ವಿಮೆ ಯೋಜನೆ

ಏನಿದು ಬೀಡ್ ಸೂತ್ರ ?

- ಬೆಳೆವಿಮೆಗೆ ಕಾಯಕಲ್ಪ ನೀಡಲು ಮಹಾರಾಷ್ಟ್ರದ ಮರಾಠಾವಾಡ ವಲಯದ ಬರಪೀಡಿತ ಬೀಡ್ ಜಿಲ್ಲೆಯಲ್ಲಿ ಅಳವಡಿಸಿದ ಪರ್ಯಾಯ ಮಾದರಿಯ ಹೆಸರು 'ಬೀಡ್ ಸೂತ್ರ'. ಇದನ್ನು 80-110 ಸೂತ್ರ ಎಂದೂ ಕರೆಯಲಾಗುತ್ತದೆ.
- ಈ ಸೂತ್ರವು ಬೆಳೆ ವಿಮೆ ಕಂಪನಿಗಳಿಗೆ ಸಂಭನೀಯ ನಷ್ಟವನ್ನು ತಡೆಯುವ ಹಾಗೂ ರೈತರಿಗೆ ಬೆಳೆ ವಿಮೆ ಕಲ್ಪಿಸುವ ಉದ್ದೇಶವನ್ನು ಹೊಂದಿದೆ.
- ಈ ಮಾದರಿಯಲ್ಲಿ ಒಟ್ಟು ಪ್ರೀಮಿಯಂನ ಶೇ.110ಕ್ಕಿಂತಲೂ ಮೇಲ್ಪಟ್ಟ ಕ್ಲೇಮ್‌ಗಳನ್ನು ರಾಜ್ಯ ಸರಕಾರ ಭರಿಸುತ್ತದೆ. ಇದು ವಿಮೆ ಕಂಪನಿಗಳಿಗೆ ಸಂಭವನೀಯ ನಷ್ಟವನ್ನು ತಡೆಯುತ್ತದೆ.
- ಇದೇ ವೇಳೆ ವಿಮೆ ಪರಿಹಾರದ ಕ್ಲೇಮ್ , ವಿಮೆ ಪ್ರೀಮಿಯಂ ಸಂಗ್ರಹಕ್ಕಿಂತಲೂ ಕಡಿಮೆಯಾದರೆ, ಆಗ ವಿಮೆ ಕಂಪನಿಗಳು ಶೇ.20ರಷ್ಟನ್ನು ಇಟ್ಟುಕೊಂಡು ಉಳಿದ ಪ್ರೀಮಿಯಂ ಅನ್ನು ರಾಜ್ಯ ಸರಕಾರಕ್ಕೆ (ರಿಫಂಡ್) ಮರು ಪಾವತಿಸಬೇಕು.
- ಹೀಗಾಗಿ ರಾಜ್ಯ ಸರಕಾರಗಳಿಗೆ ಇದು ಆದಾಯದ ಮತ್ತೊಂದು ಮೂಲವಾಗಿದೆ.

07-09-2021 Vk Pg 14

For more information visit
University Library Website
Web - uasbagrilibindia.org
E-mail- librarian@uasbangalore.edu.in